ನೋವು ಹೇಗಿತ್ತೆಂದರೆ, ಬಾಯೊಳಗಿಂದ ಹೊರಟ ಚೀತ್ಕಾರ ಕೂಡ ಹೊರ ಬರಲು ಭಯ ಪಟ್ಟಿತು.

"ನೀನೂ ಅಷ್ಟೇ..'' ಎಂದು ಪಾರುವಿನ ಜುಟ್ಟನ್ನು ಗಟ್ಟಿಯಾಗಿ ಹಿಡಿದಾಗ, ಅವಳ ಲಂಗ ಅಲ್ಲೇ ಒದ್ದೆಯಾಗಿತ್ತು.

★★★

"ಕರಿಯಕ್ಕನದ್ದ ಫೋನ್? ಇನ್ನು ಎಷ್ಟು ಹೊತ್ತಾಗುತ್ತದಂತೆ ಅವರು ಬರುವುದು. ಆರು ತಿಂಗಳ ಹಿಂದೆ ನಾಗಕ್ಕ ಬಂದು ಪರಿಹಾರ ಕೊಟ್ಟು ಹೋದದ್ದಕ್ಕೆ ಎಷ್ಟು ಒಳ್ಳೆಯದಾಗಿತ್ತು... ನಿಜವಾಗಿಯೂ ದೇವತೆ ಅವಳು. ಈ ಸಾರಿ ಬಂದಿರುವ ಕಷ್ಟವನ್ನು ನಿವಾರಿಸಿ ಕೊಟ್ಟರೆ ದಕ್ಷಿಣೆಯಲ್ಲಿ ಕಂಜೂಸಿ ಮಾಡುವುದಿಲ್ಲ. ಒಂದು ರೇಶ್ಮೆ ಸೀರೆ ಕೂಡ ಕೊಡುವ ಅಂತ ಇದ್ದೇನೆ ಮಾರಾಯಾ" ಎಂದರು ಅಜ್ಜಮ್ಮ. ಪಾರು ಮತ್ತು ಚೇತುವನ್ನು ಹೊರತು ಪಡಿಸಿ ಮನೆಯಲ್ಲಿ ಎಲ್ಲರೂ ಕಾತರದಿಂದ ನಾಗಕ್ಕನ ದಾರಿ ಕಾಯುತ್ತಿದ್ದರು.

"ನಾಗಕ್ಕ, ಮನೆಯಲ್ಲಿರುವ ಚಿನ್ನ ಎತ್ತಿಕೊಂಡು ಓಡಿ ಹೋಗಿದ್ದಾಳಂತೆ."

"ರೀ... ದೇವರ ಸೇವೆಯ ಹುಡುಗಿ ಅವಳು, ಯಾರದೋ ಮಾತು ಕೇಳಿ ಅಪಚಾರದ ಮಾತು ಆಡಬೇಡಿ" ಎಂದು ಗಂಡನ ಪರವಾಗಿ ಕೆನ್ನೆ ತಟ್ಟಿಕೊಂಡಳು ಸರೋಜ.

"ಸುಮ್ಮನೆ ಹೇಳಲಿಕ್ಕೆ ನಂಗೆಂತ ಮಂಡೆಪೆಟ್ಟ... ಪತ್ರ ಬರೆದಿಟ್ಟು ಹೋಗಿದ್ದಾಳಂತೆ. ಅವಳ ತಮ್ಮನೇ ಫೋನೆತ್ತಿಕೊಂಡದ್ದು, ಅವನೇ ಹೇಳಿದ್ದು" ಎಂದು ಹೆಂಡತಿಯ ಮೇಲೆ ರೇಗಿದ ರಾಮಣ್ಣ.

"ಒಬ್ಬಳೇ ಹೋಗಿದ್ದಾಳಂತ...'' ಕೇಳಿತು ಅಜ್ಜಮ್ಮ.

"ವಯಸ್ಸಿನ ಹುಡುಗಿಗೆ ಒಬ್ಬಳೇ ಓಡಿ ಹೋಗಲಿಕ್ಕೆ ಎಂಥ ಹುಚ್ಚ..."

"ಯಾರ ಜೊತೆ ಓಡಿಹೋಗಿರಬಹುದು?"

ಕೋಣೆಯಲ್ಲಿ ಕುಳಿತು ಓದಿಕೊಳ್ಳುತ್ತಿದ್ದ ಚೇತು, 'ಇನ್ಯಾರ ಜೊತೆ, ಆ ಮಹೇಶಣ್ಣನ ಜೊತೆ' ಎಂದು ಮನಸ್ಸಿನಲ್ಲೇ ಅಂದುಕೊಂಡು, ಕಿಟಕಿಯಾಚೆ ಕಾಣುತ್ತಿದ್ದ ಮಹೇಶನ ಮನೆ ಅಂಗಳದ ಕಡೆ ನೋಡಿದ. ಅಲ್ಲಿ ಮಹೇಶ ತನ್ನ ತಮ್ಮನ ಜೊತೆ ಅಂಗಳದಲ್ಲಿ ಆರಾಮಾಗಿ ಟೆನ್ನಿಸ್ ಆಡುತ್ತಿದ್ದ.

"ಹೌದಣ್ಣ... ಯಾರ ಜೊತೆ ಹೋದದ್ದು" ಗಿರಿಯಣ್ಣನಿಗೆ ಕುತೂಹಲ ತಡೆಯಲಿಕ್ಕಾಗಲಿಲ್ಲ.

"ಪೀಟರ್ ಪರ್ಬುವಿನ ಅಕ್ಕನ ಮಗನ ಜೊತೆ" ಎನ್ನುತ್ತಾ, ತಮ್ಮನ ಹತ್ತಿರ ಸರಿದು, "ಸರಿ ಹೋಯಿತು ಬಿಡು, ಹೇಗೂ ಅವನೂ ಒಂದು ರೀತಿಯಲ್ಲಿ ಅತ್ತೆ ಮಗನೇ ಅಲ್ಲವಾ?" ಎಂದು ಪಿಸುಗುಟ್ಟಿದ. ಅಣ್ಣ ತಮ್ಮಂದಿರು ಮೀಸೆ ಅಡಿಯಲ್ಲೇ ನಕ್ಕರು.

**ಶೈಲಾ**

ಮೂಲತಃ ಉಡುಪಿ ಜಿಲ್ಲೆಯವರು. ಬೆಂಗಳೂರಿನಲ್ಲಿ ವಾಸ. ಮಂಗಳೂರು ವಿಶ್ವವಿದ್ಯಾಲಯದಿಂದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಕೆಲ ಕಾಲ ಪತ್ರಕರ್ತೆಯಾಗಿದ್ದರು. ಪ್ರಸ್ತುತ, ಪ್ರಕಾಶನ ಮತ್ತು ಜಾಹೀರಾತು ಸಂಸ್ಥೆಗಳಿಗೆ ಅನುವಾದ ಮತ್ತು ಬರವಣಿಗೆಗೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಿದ್ದಾರೆ. ಪತ್ರಿಕೆಗಳಲ್ಲಿ ಕತೆ, ಲೇಖನ ಮತ್ತು ಲಲಿತ ಪ್ರಬಂಧಗಳು ಪ್ರಕಟವಾಗಿವೆ. ಅಭಿನಯ ಮತ್ತು ರಂಗ ತರಬೇತಿಯಲ್ಲಿ ಡಿಪ್ಲೊಮಾ ಪಡೆದಿದ್ದು, ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದಾರೆ.